39

ಈದ್ ಮಿಲಾದ್ ಮತ್ತು ಇಸ್ಲಾಮ್



الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

ಇಸ್ಲಾಂ ಒಂದು ಪಕ್ವ–ಪರಿಪೂರ್ಣವಾದ ದೀನ್ ಅಥವಾ ಜೀವನ ಕ್ರಮವಾಗಿದೆ. ಮನುಷ್ಯ ವರ್ಗವು ಇತರ ಜೀವಿಗಳಿಗೆ ವ್ಯತಿರಿಕ್ತವಾಗಿ ಭೂಮಿಯಲ್ಲಿ ಅಲ್ಲಾಹನ ಪ್ರತಿನಿಧಿಗಳಾಗಿ ಜೀವಿಸಬೇಕೆಂಬ ನೆಲೆಯ-ಲ್ಲಿ ಮನುಷ್ಯನ ಅನುಸರಣೆ, ತರಬೇತಿ ಮತ್ತು ಜೀವನಕ್ಕೆ ಬೇಕಾದ ಎಲ್ಲ ಮಾರ್ಗದರ್ಶನಗಳನ್ನೂ ಒದಗಿಸಲಾಗಿದೆ.

ಇಸ್ಲಾಮಿನ ಆಧಾರ–ಪ್ರಮಾಣಗಳಾದ ಕುರ್‌ಆನ್ ಮತ್ತು ಹದೀಸ್ ಮನುಷ್ಯನ ಇಹ–ಪರ ವಿಜಯಕ್ಕೆ ಬೇಕಾದ ಸರ್ವ ಮಾಹಿತಿಯನ್ನು ಮತ್ತು ಮಾರ್ಗದರ್ಶನವನ್ನು ಒದಗಿಸುತ್ತದೆ. ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ-ನ್ನು ಮೀರಿಸುವ ಯಾವುದೇ ತತ್ವಜ್ಞಾನ ಜಗತ್ತಿನಲ್ಲಿಲ್ಲ ಎನ್ನುವುದು ಸತ್ಯ. ಆದ್ದರಿಂದ ಈ ಪರಿಪೂರ್ಣ ಧರ್ಮ-ದಲ್ಲಿ ಅದರಲ್ಲಿಲ್ಲದ ಸಂಗತಿಗಳನ್ನು ಸೇರ್ಪಡೆಗೊಳಿಸುವು-ದು ಧರ್ಮವನ್ನು ವಿರೂಪಗೊಳಿಸುವುದಕ್ಕೆ ಸಮವಾಗಿದೆ.

ಅಲ್ಲಾಹು ಹೇಳುತ್ತಾನೆ:

"ಇಂದು ನಾನು ನಿಮ್ಮ ಧರ್ಮವನ್ನು ನಿಮಗೆ ಪೂರ್ತಿಗೊಳಿಸಿದ್ದೇನೆ, ನನ್ನ ಅನುಗ್ರಹವನ್ನು ನಿಮಗೆ ಪೂರ್ಣಗೊಳಿಸಿದ್ದೇನೆ ಮತ್ತು ಇಸ್ಲಾಮನ್ನು ನಿಮ್ಮ ಧರ್ಮವೆಂಬ ನೆಲೆಯಲ್ಲಿ ಅಂಗೀಕರಿಸಿದ್ದೇನೆ." (ಅಲ್‌ಮಾಇದ 3)

ಪ್ರವಾದಿಯವರು(ಸ) ಹೇಳುತ್ತಾರೆ:

"ನಾನು ನಿಮಗೆ ಎರಡು ವಸ್ತುಗಳನ್ನು ಬಿಟ್ಟು ಹೋಗುತ್ತೇನೆ. ನೀವು ಎಂದಿನ ತನಕ ಅವುಗಳನ್ನು ಭದ್ರವಾಗಿ ಹಿಡಿದುಕೊಳ್ಳುತ್ತೀರೋ ಅಂದಿನ ತನಕ ನೀವು ಪಥಭ್ರಷ್ಟರಾಗಲಾರಿರಿ. ಅವು ಅಲ್ಲಾಹನ ಗ್ರಂಥ (ಕುರ್‌ಆನ್) ಮತ್ತು ನನ್ನ ಚರ್ಯೆ (ಹದೀಸ್)." (ಮುವತ್ತ ಮಾಲಿಕ್, ಮುಸ್ತದ್ರಕ್ ಹಾಕಿಂ)

ನುಬುವತ್ತಿನ ಆರಂಭದಿಂದ ಖೈರುಲ್ ಖುರೂನ್ (ಮೂರು ಅತ್ಯುತ್ತಮ ಶತಮಾನ)ಗಳ ತನಕ ಇಸ್ಲಾಮಿನ ಶಿಕ್ಷಣ ಮತ್ತು ಬೋಧನೆಯು ಪರಿಶುದ್ಧವೂ

ಪಾವನವೂ ಆಗಿತ್ತು. ಇದರಲ್ಲಿ ಮುಶ್ರಿಕ್‌ಗಳ ರೀತಿ–ರಿವಾಜುಗಳು, ಅಂಧವಿಶ್ವಾಸಗಳು, ಆಚಾರ–ವಿಚಾರಗಳು ಮತ್ತು ಬಿದ್‌ಅತ್–ಕುರಾಫಾತ್‌ಗಳು ಎಳ್ಳಷ್ಟೂ ಬೆರಕೆಯಾಗಿರಲಿಲ್ಲ. ಆದರೆ ಯಹೂದೀ-ನಸಾರಾ ಮತ್ತು ಇತರ ಇಸ್ಲಾಮಿನ ಶತ್ರುಗಳು ತಮ್ಮ ಅಪವಿತ್ರ ಇರಾದೆಗಳನ್ನು ಕಾರ್ಯಗತಗೊಳಿಸಿ ಇಸ್ಲಾಮಿ ಶಿಕ್ಷಣ ವ್ಯವಸ್ಥೆಯಲ್ಲಿ ಕಲಬೆರಕೆ ಮಾಡಲು ನಾಮಧಾರಿ ಮುಸ್ಲಿಮರಾದ ದರ್ವೇಶಿಗಳು, ಸೂಫಿಗಳು, ಸ್ವಾರ್ಥಿಗಳಾದ ಪುರೋಹಿತರು ಗಳನ್ನು ಬಳಸಿಕೊಂಡರು. ಅವರು ಮುಸ್ಲಿಮರಿಗೆ ಇಸ್ಲಾಮಿನ ಹೆಸರಿನಲ್ಲಿ ಇಸ್ಲಾಮೇತರ ವಿಷಯಗಳನ್ನು ನಿರಂತರ ಬೋಧಿಸುತ್ತಾ, ಮುಸ್ಲಿಮರನ್ನು ಇಸ್ಲಾಮಿನ ಬುನಾದಿಯಿಂದ ದೂರ ಸರಿಸುತ್ತಾ, ಮುಸ್ಲಿಮೇತರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವಂತೆ ಮಾಡಿದರು. ಇಸ್ಲಾಮಿನ ಶತ್ರುಗಳ ಆಶ್ರಯದಲ್ಲಿ ಇಸ್ಲಾಮಿನ ತತ್ವಾದರ್ಶಗಳು ಯಾವ ರೀತಿ ವಿರೂಪಗೊಂಡವು ಎಂದರೆ

ಅಂತಿಮವಾಗಿ ಕುರ್‌ಆನ್ ಮತ್ತು ಸುನ್ನತ್‌ಗಳ ಪವಿತ್ರ ಬೋಧನೆಗಳು ಮುಸ್ಲಿಮರ ಕಲುಷಿತ ಆಚಾರ-ವಿಚಾರ-ಗಳ ಮುಂದೆ ಕಣ್ಣೀರಿಡುವಂತಾಯಿತು.

ಶಿರ್ಕ್ ಮತ್ತು ಬಿದ್‌ಅತ್‌ಗಳು ಎಂತಹ ಕ್ಷುದ್ರ ವ್ಯಾಧಿ-ಗಳಾಗಿವೆ ಎಂದರೆ ಅವು ಕ್ಯಾನ್ಸರ್‌ನಂತೆ ಮನುಷ್ಯನ ವಿಶ್ವಾಸವೆಂಬ ಶರೀರವನ್ನು ಪ್ರವೇಶಿಸಿ ನಿಧಾನವಾ-ಗಿ ಅವನ ತತ್ವಾದರ್ಶಗಳನ್ನೆಲ್ಲಾ ಕಲಸುಮೇಲೋಗರ ಮಾಡಿ ಅವನ ಆಚಾರ–ವಿಚಾರಗಳನ್ನು ವಿರೂಪಗೊ-ಳಿಸಿ ಬಿಡುತ್ತದೆ. ಅವನು ಕುರ್‌ಆನ್ ಮತ್ತು ಸುನ್ನತ್‌ನ ಚೌಕಟ್ಟನ್ನು ತೊರೆದು ಸಂಪ್ರದಾಯ ಹಾಗೂ ನವೀನಾ-ಚಾರಗಳ ಸರಹದ್ದಿನೊಳಗೆ ಪ್ರವೇಶಿಸಿ ಬಿಡುತ್ತಾನೆ. ಈ ಕಾರಣಕ್ಕಾಗಿ ಇಸ್ಲಾಮಿಕ್ ಶರಿಯತ್ ಕುರ್‌ಆನ್ ಮತ್ತು ಸುನ್ನತ್ ಅನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕೆಂಬ ಸೂ-ಚನೆಯನ್ನು ಮತ್ತು ಶಿರ್ಕ್ ಹಾಗೂ ಬಿದ್‌ಅತ್‌ಗಳಿಂದ ದೂರವಿರಬೇಕೆಂಬ ತಾಕೀತನ್ನು ಮಾಡುತ್ತದೆ.

ಅಲ್ಲಾಹು ಹೇಳುತ್ತಾನೆ:

“ಪ್ರವಾದಿಯವರು ನಿಮಗೆ ಏನು ಕೊಡುತ್ತಾರೋ ಅದನ್ನು ಸ್ವೀಕರಿಸಿ. ಅವರು ಯಾವುದರಿಂದ ತಡೆಯು-ತ್ತಾರೋ ಅದರಿಂದ ದೂರವಿರಿ.” (ಅಲ್‌ಹಶ್ರ್ 7)

ಇನ್ನೊಂದು ಕಡೆ ಅಲ್ಲಾಹು ಹೇಳುತ್ತಾನೆ:

“ಪ್ರವಾದಿಯವರ ಆಜ್ಞೆಗೆ ವಿರುದ್ಧವಾಗಿ ಚಲಿಸುವವರು ತಾವು ಯಾವುದಾದರೂ ಆಪತ್ತಿನಲ್ಲಿ ಸಿಲುಕಿ ಬಿಡಬ-ಹುದು ಅಥವಾ ತಮ್ಮ ಮೇಲೆ ವೇದನಾಯುಕ್ತ ಶಿಕ್ಷೆ ಎರಗಬಹುದೆಂದು ಭಯಪಡಬೇಕು..” (ಅನ್ನೂರ್ 63)

ಪ್ರವಾದಿಯವರು(ಸ) ಹೇಳುತ್ತಾರೆ:

“ಧರ್ಮದಲ್ಲಿ ಹೊಸ ಹೊಸ ಆಚಾರಗಳನ್ನು ಮಾಡಬೇಡಿ. ಏಕೆಂದರೆ ಎಲ್ಲಾ ಹೊಸ ಆಚಾರಗಳು ಬಿದ್‌ಅತ್ ಆಗಿವೆ. ಎಲ್ಲಾ ಬಿದ್‌ಅತ್‌ಗಳು ಪಥಭ್ರಷ್ಟ-

ತೆಯಾಗಿವೆ. ಎಲ್ಲಾ ಪಥಭ್ರಷ್ಟತೆಗಳ ಪರಿಣಾಮ ನರಕವಾಗಿದೆ.”

ಇನ್ನೊಂದು ವರದಿಯಲ್ಲಿ ಹೀಗಿದೆ:

“ಧರ್ಮದಲ್ಲಿ ಯಾರಾದರೂ ಅದರಲ್ಲಿಲ್ಲದ ಹೊಸ ಆಚಾರವನ್ನು ತಂದರೆ ಅದು ತಿರಸ್ಕೃತವಾಗಿದೆ.” (ಅಲ್‌ಬುಖಾರಿ ಮತ್ತು ಮುಸ್ಲಿಂ)

ಹಝ್ರತ್ ಇಬ್ನ್ ಅಬ್ಬಾಸ್(ರ) ಹೇಳುತ್ತಾರೆ: “ಅಲ್ಲಾಹನನ್ನು ಭಯಪಡಿರಿ. ಕುರ್‌ಆನ್ ಮತ್ತು ಸುನ್ನತ್ ಅನ್ನು ಅನುಸರಿಸಿರಿ. ಅದನ್ನು ಭದ್ರವಾಗಿ ಹಿಡಿದುಕೊಳ್ಳಿರಿ. ಧರ್ಮದಲ್ಲಿ ಹೊಸ ಆಚಾರಗಳನ್ನು ಸೇರ್ಪಡೆಗೊಳಿಸುವುದನ್ನು ಬಿಟ್ಟುಬಿಡಿ.” (ಅದ್ದಾರಿಮೀ 1/66)

ಇಮಾಮ್ ಸುಫ್ಯಾನ್ ಅಸ್ಸೌರಿ(ರ) ಹೇಳುತ್ತಾರೆ: “ಪ್ರವಾದಿಯವರ ಚರ್ಯೆಯಲ್ಲಿ ಇಲ್ಲದಂತಹ ಯಾವುದೇ ಸಂಕಲ್ಪ ಅಥವಾ ಪ್ರವೃತ್ತಿ ಸ್ವೀಕಾರಾರ್ಹವಲ್ಲ.”

ಇಮಾಮ್ ಅಹ್ಮದ್ ಇಬ್ನ್ ಹಂಬಲ್(ರ) ಹೇಳುತ್ತಾರೆ: "ರಕ್ಷೆ ಇರುವುದು ಕುರ್‌ಆನ್ ಮತ್ತು ಸುನ್ನತ್ ಅನ್ನು ಅವಲಂಬಿಸುವುದರಲ್ಲಿ ಮಾತ್ರ. ಎಲ್ಲಾ ರೀತಿಯ ಪರಂಪರೆ ಮತ್ತು ಸಂಪ್ರದಾಯಗಳಿಂದ ದೂರವಿರಿ. ನಿಮ್ಮ ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ನೂತನವಾದಿಗಳಿಂದ ಸಲಹೆ ಪಡೆಯಬೇಡಿ." (ತಬಕಾತುಲ್ ಹನಾಬಿಲ 1/342)

ಇಸ್ಲಾಮಿನ ಶತ್ರುಗಳು ಇಸ್ಲಾಮಿನ ಪರಿಶುದ್ಧತೆಯನ್ನು ಮಲಿನಗೊಳಿಸಲು ಇಸ್ಲಾಮಿನ ಅಂದಗೆಡಿಸಿ ವಿರೂಪಗೊಳಿಸಲು ಧರ್ಮದಲ್ಲಿ ನೂತನವಾಗಿ ಸೃಷ್ಟಿಸಿದ ಕಾರ್ಯಗಳಲ್ಲಿ ಮುಖ್ಯವಾದ ಒಂದು ರಬಿವುಲ್ ಅವ್ವಲ್ ತಿಂಗಳ 12ನೇ ದಿನ ಆಚರಿಸಲಾಗುವ ಮೀಲಾದುನ್ನೆಬಿ ಎಂಬ ಬಿದ್‌ಅತ್. ಇದು ಹಿಜರಿ ಏಳನೇ ಶತಮಾನದಲ್ಲಿ ಸ್ವಾರ್ಥ ಹಿತಾಸಕ್ತಿ ಸ್ವೇಚ್ಛಾಚಾರಿಯಾದ ಮುಝಫ್ಫರುದ್ದೀನ್ ಎಂಬ ಆಡಳಿತಗಾರ ಮತ್ತು ಬಿದ್‌ಅತೀ ಮೌಲ್ವಿ

ಉಮರ್ ಬಿನ್ ದಹ್ಯಾರ ಪರಸ್ಪರ ಸಹಕಾರದಿಂದ ಚಲಾವಣೆಗೆ ಬಂತು. ಬಾದಶಾ ಮುಝಫ್ಫರುದ್ದೀನ್ ಕುರಿತು ಅಲ್ಲಾಮಾ ಝಹಬೀ, ಅವರು ಮೀಲಾದುನ್ನೆ-ಬಿ ಆಚರಣೆಗಾಗಿ ವಿಪರೀತ ಹಣ ಸುರಿಯುತ್ತಿದ್ದರೆಂದು ಹೇಳುತ್ತಾರೆ.

ಮೌಲ್ವಿ ಉಮರ್ ಬಿನ್ ದಹ್ಯಾರ ಕುರಿತು ಹಾಫಿಝ್ ಇಬ್ನ್ ಹಜರ್ ಹೇಳುತ್ತಾರೆ: “ಅವರು ಆಡಂಬರ ಪ್ರಿಯರು. ಸಲಫು ಸ್ವಾಲಿಹೀನ್‌ಗಳ ಬಗ್ಗೆ ಮತ್ತು ಧಾರ್ಮಿಕ ಮುಖಂಡರ ಬಗ್ಗೆ ಹಗುರವಾಗಿ ಮಾತ-ನಾಡುವವರು. ಅವರ ಗೌರವಕ್ಕೆ ಚ್ಯುತಿ ತರುವಂತಹ ಶಬ್ದಗಳನ್ನು ಬಳಸುವವರು. ಅವರು ಕೆಟ್ಟ ಮಾತುಗಳ-ನ್ನಾಡುವವರು, ದುರಹಂಕಾರಿ, ಧಾರ್ಮಿಕ ವಿಷಯದಲ್ಲಿ ಶ್ರದ್ಧೆ ಇಲ್ಲದವರೂ ಆಗಿದ್ದರು.” (ಲಿಸಾನುಲ್ ಮೀಝಾನ್ 4/295)

ಪ್ರವಾದಿಯವರ(ಸ) ಜನ್ಮದಿನದ ಕುರಿತು ಭಿನ್ನಮತವಿದೆ

ಎನ್ನುವುದು ನಿರಾಕರಿಸಲಾಗದ ಸತ್ಯ. ಅದೇ ರೀತಿ ಹಿಜರಿ ಮುನ್ನೂರರ ತನಕ ಜೀವಿಸಿದ್ದ ಅತ್ಯುತ್ತಮ ಜನಸಮು-ದಾಯ ಮೀಲಾದುನ್ನೆಬಿ ಆಚರಿಸಿಲ್ಲ ಎನ್ನುವುದು ಕೂಡ ಸತ್ಯ. ಏಕೆಂದರೆ ಅವರು ಮೀಲಾದುನ್ನೆಬಿ ಆಚರಿಸಿದ್ದಾರೆ ಎನ್ನುವುದಕ್ಕೆ ಒಂದೇ ಒಂದು ದುರ್ಬಲ ಆಧಾರ ಕೂಡ ಯಾವುದೇ ಅಧಿಕೃತ ಗ್ರಂಥಗಳಲ್ಲಿ ದಾಖಲಾಗಿಲ್ಲ. ವಾ-ಸ್ತವವಾಗಿ ಮಿಲಾದುನ್ನೆಬಿ ಆಚರಣೆ ಆರಂಭವಾದದ್ದೇ ಹಿಜರಿ ಏಳನೇ ಶತಮಾನದಲ್ಲಿ.

ಪ್ರವಾದಿಯವರು(ಸ) ಅಲ್ಲಾಹನ ಸಂದೇಶವಾಹಕರು ಎಂದು ನಂಬುವುದು, ಅವರನ್ನು ನಮ್ಮ ಸರ್ವಸ್ವಕ್ಕಿಂತ-ಲೂ ಮಿಗಿಲಾಗಿ ಪ್ರೀತಿಸುವುದು ಸತ್ಯವಿಶ್ವಾಸಿಗಳ ಕರ್ತ-ವ್ಯವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರವಾದಿಯವರ ಚರ್ಯೆಯನ್ನು ಜೀವನದಲ್ಲಿ ಅಳವಡಿ-ಸಿ ಅವರ ಹದೀಸ್‌ಗಳನ್ನು ಮಾರ್ಗದರ್ಶಿಯಾಗಿ ಬಳಸಿ ಜೀವನ ನಡೆಸುವುದು ಅಲ್ಲಾಹನ ಸಂಪ್ರೀತಿಯನ್ನು

ಗಳಿಸುವುದಕ್ಕೆ ಇರುವ ಮಾರ್ಗವಾಗಿದೆ. ಅವರ ಜೀವನಶೈಲಿಯನ್ನು ಕಲಿಯುವುದು ಎಲ್ಲಾ ಮುಸಲ್ಮಾನರ ಮೇಲೆ ಕಡ್ಡಾಯವಾಗಿದೆ. ಅವರ ಜೀವನ ಮತ್ತು ಆದರ್ಶದ ಕುರಿತು ಕಲಿಯಲು ಮತ್ತು ಕಲಿಸಲು, ಅವರನ್ನು ಪ್ರಶಂಸಿಸಲು ಮತ್ತು ಗುಣಗಾನ ಮಾಡಲು, ಅವರ ಹೆಸರಲ್ಲಿ ಸ್ವಲಾತ್ ಹೇಳಲು ಅಸಾಧ್ಯವೆನ್ನುವ ಒಂದು ಗಳಿಗೆ ಮುಸಲ್ಮಾನನ ಜೀವನದಲ್ಲಿ ಬರಬಾರದು.

ಹೀಗಿರುವಾಗ ರಬಿವುಲ್ ಅವ್ವಲ್ 12ನೇ ತಾರೀಕನ್ನು ನಿಶ್ಚಯಿಸಿಕೊಂಡು ಅಂದು ಸಂತೋಷ ಆಚರಣೆ ಮಾಡುವುದು, ಸಭೆ–ಸಮಾರಂಭಗಳನ್ನು ಹಮ್ಮಿಕೊಳ್ಳುವುದು, ಮೆರವಣಿಗೆ ಮಾಡುವುದು, ಮೌಲಿದ್ ಪಾರಾಯಣ ಮಾಡುವುದು, ಅಂದು ವಿಶೇಷವಾಗಿ ಸಾಮೂಹಿಕ ಅನ್ನದಾನ ಮಾಡುವುದು ಇವುಗಳ ಅರ್ಥವೇನು?

ಪ್ರವಾದಿಯವರ(ಸ) ಸಂಗಾತಿಗಳಾಗಿದ್ದು, ಅವರಿಗಾ-

ಗಿ ಮನೆ, ವ್ಯಾಪಾರ, ಊರು, ಕುಟುಂಬ, ಆಸ್ತಿಪಾಸ್ತಿ ಎಲ್ಲವನ್ನೂ ತ್ಯಾಗ ಮಾಡಿ ನೂರಾರು ಕಿಲೋಮೀಟರ್ ದೂರ ವಲಸೆ ಬಂದು ಪ್ರವಾದಿಯವರ(ಸ) ಬೆವರು ಬಿದ್ದಲ್ಲಿ ತಮ್ಮ ರಕ್ತ ಹರಿಸಲು ಸಿದ್ಧರಾಗಿದ್ದ ಸ್ವಹಾಬಿಗಳಾಗಲಿ, ಅವರ ನಂತರದಲ್ಲಿ ಇಸ್ಲಾಮಿನ ರಕ್ಷಣೆ ಮತ್ತು ಏಳಿಗೆಗಾಗಿ ತಮ್ಮ ಸಂಪೂರ್ಣ ಜೀವನವನ್ನೇ ಯುದ್ಧಭೂಮಿಯಲ್ಲಿ ಕಳೆದ ತಾಬಿಈನ್ ಅಥವಾ ತಬಉತ್ತಾಬಿಈನ್‌ಗಳಾಗಲಿ ಇದನ್ನು ಆಚರಿಸುವುದೋ ಅಥವಾ ಇದರ ಬಗ್ಗೆ ಸಲಹೆ ನೀಡುವುದೋ ಮಾಡಿದ್ದಾಗಿ ಎಲ್ಲೂ ಕಂಡು ಬರುವುದಿಲ್ಲ.

ನುಬುವ್ವತ್ತಿನ ನಂತರ ಪ್ರವಾದಿಯವರು(ಸ) ಇಪ್ಪತ್ತಮೂರು ವರ್ಷ ಜೀವಂತವಾಗಿದ್ದರು. ನಂತರ 30 ವರ್ಷ ಖುಲಫಾಉರ್ರಾಶಿದೀನ್‌ಗಳ ಆಡಳಿತವಿತ್ತು. ಸರಿಸುಮಾರು 220 ವರ್ಷ ತಾಬಿಈನ್ ಮತ್ತು ತಬಉತ್ತಾಬಿಈನ್‌ಗಳು ಜೀವಿಸಿದ್ದರು. ಪ್ರವಾದಿ ಪ್ರೇಮ ಮತ್ತು ಪ್ರವಾದಿ ಪ್ರೀತಿ-

ಯಿಂದ ಇವರ ಹೃದಯಗಳು ತುಂಬಿ ತುಳುಕುತ್ತಿದ್ದವು. ಪ್ರವಾದಿಯ ಅನುಸರಣೆಗಾಗಿ ಇವರು ಸದಾ ಕಾತರಿಸುತ್ತಿದ್ದರು. ಇವರು ತೋರಿಸಿದಂತಹ ಗೌರವ, ಪ್ರೀತಿ, ಸ್ನೇಹ, ತ್ಯಾಗ, ವಿಧೇಯತೆ, ಅನುಸರಣೆ, ಸಮರ್ಪಣಾ ಮನೋಭಾವ ಮಾನವ ಇತಿಹಾಸದಲ್ಲೇ ಅದ್ವಿತೀಯವಾಗಿದೆ.

ಆದರೆ ಇವರಲ್ಲಿ ಯಾರೂ ಕೂಡ ಮೀಲಾದುನ್ನೆಬಿ ಆಚರಿಸಿದ ಬಗ್ಗೆ ಚರಿತ್ರೆಯಲ್ಲಿ ದಾಖಲಾಗಿಲ್ಲ. ಯಾವ ಕಾರ್ಯವೂ ಈ ಸಜ್ಜನ ಸಮೂಹಕ್ಕೆ ಪ್ರತಿಫಲದಾಯಕ ಮತ್ತು ಪುಣ್ಯಕರ್ಮ ಆಗಿರಲಿಲ್ಲವೋ ಆ ಕಾರ್ಯವು ಇಂದು ಪ್ರತಿಫಲದಾಯಕ ಮತ್ತು ಪುಣ್ಯಕರ್ಮ ಆಗುವುದಾದರೂ ಹೇಗೆ?

ಮೀಲಾದುನ್ನೆಬಿ ಆಚರಿಸುವುದರಿಂದ ಲಭ್ಯವಾಗುತ್ತದೆ ಎಂದು ಇಂದಿನ ಬಿದ್ಅತಿಗಳು ಹೇಳುವ ಲಾಭ ಮತ್ತು ಸಮೃದ್ಧಿ ಅಂದಿನ ಕಾಲದ ಜನರಿಗೆ ಯಥೇಷ್ಟವಾಗಿ

ಲಭಿಸಿತ್ತು. ಆದರೆ ಅವರಲ್ಲಿ ಯಾರೂ ಕೂಡ ಮೀಲಾದುನ್ನೆಬಿಯನ್ನು ಆಚರಿಸಿಲ್ಲ. ವಾಸ್ತವದಲ್ಲಿ ಪ್ರವಾದಿಯವರು(ಸ) ಮತ್ತು ಅವರ ಸಂಗಡಿಗರು ಹೇಳಿದ್ದು ಮತ್ತು ಮಾಡಿದ್ದು ಮಾತ್ರ ದೀನ್ ಆಗಿದೆ. ಯಾವ ಕಾರ್ಯಗಳು ಪ್ರವಾದಿಯವರು(ಸ) ಮತ್ತು ಅವರ ನಂತರದ ಮೂರು ಉತ್ತಮ ಶತಮಾನದ ಜನರಿಗೆ ದೀನ್ ಆಗಿರಲಿಲ್ಲವೋ ಆ ಕಾರ್ಯಗಳು ಅನಂತರದ ಜನರಿಗೂ ದೀನ್ ಆಗಲು ಸಾಧ್ಯವೇ ಇಲ್ಲ. ಅವೆಲ್ಲವೂ ಧರ್ಮಬಾಹಿರವೂ ಸುಸ್ಪಷ್ಟ ಪಥಭ್ರಷ್ಟತೊ ಆಗಿವೆ.

“ಇನ್ನು ಸತ್ಯದ ಬಳಿಕ ಪಥಭ್ರಷ್ಟತೆಯಲ್ಲದೆ ಇನ್ನೇನು ಉಳಿದಿದೆ? ನಿಮ್ಮನ್ನು ಎತ್ತ ಅಲೆದಾಡಿಸಲಾಗುತ್ತಿದೆ?” (ಯೂನುಸ್ 32)

ಇಮಾಮ್ ಮಾಲಿಕ್(ರ) ಹೇಳುತ್ತಾರೆ: “ಯಾರಾದರೂ ಇಸ್ಲಾಮಿನಲ್ಲಿ ಒಂದು ಹೊಸ ಆಚಾರವನ್ನು ಒಳ್ಳೆಯ ಕಾರ್ಯ ಎಂಬ ಹೆಸರಿನಲ್ಲಿ ಸೇರ್ಪಡೆಗೊಳಿಸಿದರೆ

ಪ್ರವಾದಿಯವರು(ಸ) ತಮ್ಮ ದೌತ್ಯ ನಿರ್ವಹಣೆಯಲ್ಲಿ ವಂಚನೆ ಮಾಡಿದ್ದಾರೆ ಎಂದು ಆರೋಪಿಸುವುದಕ್ಕೆ ಸಮ. ಏಕೆಂದರೆ ಅಲ್ಲಾಹು ಹೇಳುತ್ತಾನೆ: ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತಿಗೊಳಿಸಿದ್ದೇನೆ". ಯಾವ ಕಾರ್ಯಗಳು ಅಂದು ಧರ್ಮದಲ್ಲಿ ಸೇರಿರಲಿಲ್ಲ-ವೋ ಆ ಕಾರ್ಯಗಳನ್ನು ಇಂದು ಧರ್ಮದ ಭಾಗವೆಂದು ಪರಿಗಣಿಸಲು ಸಾಧ್ಯವಿಲ್ಲ." (ಅಲ್‌ಇಅತಿಸಾಮ್ 1/33)

ಹಾಫಿಝ್ ಅಬೂಬಕರ್ ಬಗ್ದಾದಿ ಹನಫಿ(ರ) ತಮ್ಮ ಫತಾವಾದಲ್ಲಿ ಹೇಳುತ್ತಾರೆ: "ಪ್ರವಾದಿ ಜನ್ಮದಿನಾಚರಣೆ ಸಲಫ್‌ಗಳಿಂದ (ಸಜ್ಜನ ಪೂರ್ವಿಕರಿಂದ) ದೃಢಪಟ್ಟಿಲ್ಲ. ಯಾವ ಕಾರ್ಯಗಳನ್ನು ಅವರು ಮಾಡಿರಲಿಲ್ಲವೋ ಆ ಕಾರ್ಯಗಳಲ್ಲಿ ಯಾವುದೇ ಒಳಿತಿಲ್ಲ."

ಇದೇ ಪ್ರಕಾರ ಪೂರ್ವಿಕರಾದ ಅನೇಕ ಇಸ್ಲಾಮಿ ವಿದ್ವಾಂ-ಸರು ಇದು ಸತ್ಕರ್ಮಗಳನ್ನು ನಾಶಮಾಡುವ ಬಿದ್‌ಅತ್ ಎಂದು ಘೋಷಿಸಿದ್ದಾರೆ.

ಇದೆಂತಹ ವಿಚಿತ್ರ ಮತ್ತು ವಿಪರ್ಯಾಸ ನೋಡಿ! ಶಿರ್ಕ್ ಬಿದ್‌ಅತ್, ಗೊಡ್ಡು ಸಂಪ್ರದಾಯ ಮತ್ತು ಕಂದಾಚಾರಗಳಿಂದ ತಡೆಯುವ, ಪವಿತ್ರ ಕುರ್‌ಆನ್ ಮತ್ತು ಸುನ್ನತ್ ಅನ್ನು ಅನುಸರಿಸುವಂತೆ ಕರೆನೀಡುವ ಮತ್ತು ಜಗತ್ತಿನಾದ್ಯಂತ ಸತ್ಯ ಧರ್ಮವನ್ನು ಪ್ರಚಾರ ಮಾಡುತ್ತಿರುವ ಜನರನ್ನು ಮತ್ತು ಸಂಘಟನೆಗಳನ್ನು ಇಂದು ಪ್ರವಾದಿ ನಿಷೇಧಿಗಳೆಂದು ಆರೋಪಿಸಲಾಗುತ್ತಿದೆ. ವಿಭಿನ್ನ ರೀತಿಯ ಹೀನಾಯ ಶಬ್ದಗಳಿಂದ ಅವರನ್ನು ಅವಹೇಳನ ಮಾಡಲಾಗುತ್ತಿದೆ. ಪಥಭ್ರಷ್ಟ ಸೂಫಿಗಳು, ನಕಲಿ ಸಂತರು, ಮತ್ತು ಉದರ ಪೋಷಕರಾದ ಪುರೋಹಿತರು ಅವರನ್ನು ಕಾಫಿರ್ ಮತ್ತು ಮುರ್ತದ್ದ್ ಎಂದು ಮೂದಲಿಸುತ್ತಿದ್ದಾರೆ. ವಾಸ್ತವದಲ್ಲಿ ಇದು ಅತ್ಯಂತ ದುರದೃಷ್ಟಕರವಾಗಿದೆ.

ಆದರೆ ಈ ದಾರಿಯಲ್ಲಿ ಇದೇನೂ ಹೊಸತಲ್ಲ. ಇದು ಚರಿತ್ರೆಯ ಪುನರಾವರ್ತನೆಯಾಗಿದೆ. ಸತ್ಯವನ್ನು ಪ್ರತಿಪಾದಿಸುವ ಜನರ ವಿರುದ್ಧ, ಸತ್ಯ ಮತ್ತು ಸತ್ಯದ ಧ್ವಜ ವಾಹಕರ

ವಿರುದ್ಧ ತಮ್ಮ ಅಪವಿತ್ರವಾದ ಕೆಟ್ಟ ನಾಲಿಗೆಯನ್ನು ಬೇ-ಕಾಬಿಟ್ಟಿ ಬಳಸಿಕೊಂಡು ಮುಗ್ಧ ಜನರನ್ನು ವಶೀಕರಿಸು-ವವರು ಎಲ್ಲಾ ಕಾಲಘಟ್ಟದಲ್ಲೂ ಇದ್ದರೆಂದು ಚರಿತ್ರೆಯ ಪುಟಗಳಲ್ಲಿ ಕಾಣಬಹುದಾಗಿದೆ.

ಸಹೋದರ ಸಹೋದರಿಯರೇ, ಕುರ್ಆನ್ ಸುನ್ನತ್ ಮತ್ತು ಸಲಫುಸ್ಸಾಲಿಹೀನರ ರೀತಿ–ನೀತಿಗಳನ್ನು ಭದ್ರವಾ-ಗಿ ಹಿಡಿದುಕೊಳ್ಳಿ, ಶಿರ್ಕ್ ಬಿದ್ಅತ್‌ಗಳನ್ನು ಮಾಡುತ್ತಾ ಕಳೆದುಹೋದ ಸಮಯದ ಬಗ್ಗೆ ಅಲ್ಲಾಹನಲ್ಲಿ ಪಶ್ಚಾ-ತಾಪ ಪಟ್ಟು ಮರಳಿರಿ. ಇಲ್ಲದಿದ್ದರೆ ಮಹಾ ನಷ್ಟವು ನಿಮ್ಮನ್ನು ಆವರಿಸಿಕೊಳ್ಳಲಿದೆ. ಶಿರ್ಕ್ ಬಿದ್ಅತ್‌ಗಳಲ್ಲಿ ಒಳಗೊಂಡ ಸ್ಥಿತಿಯಲ್ಲಿ ನೀವು ನಿಧನರಾದರೆ ಅಂತಿಮ ದಿನ ಮಹ್ಶರಾ ಮೈದಾನದಲ್ಲಿ ಬಾಯಾರಿಕೆಯಿಂದ ಬಳಲಿ ಪ್ರವಾದಿಯವರ(ಸ) “ಹೌಳುಲ್ ಕೌಸರ್” ನ ಕಡೆಗೆ ಧಾವಿಸುವಾಗ “ಸುಹ್ಕನ್ ಸುಹ್ಕಾ” ಎನ್ನುತ್ತಾ ಹಿಂದಕ್ಕೆ ತಳ್ಳಲ್ಪಡುವಿರಿ. ಪ್ರವಾದಿಯವರ(ಸ) ಕೈಯಿಂದ

ಹೌಳುಲ್ ಕೌಸರಿನ ನೀರನ್ನು ಪಡೆದು ಕುಡಿಯುವ ಭಾಗ್ಯ ನಿಮಗೆ ದೊರೆಯಲಾರದು. ಅಲ್ಲಿ ವಿಷಾದ, ಪಶ್ಚಾತಾಪ, ಅವಮಾನ ಮತ್ತು ಬೇಗುದಿಯ ಹೊರತು ಇನ್ನೇನು ಸಿಗದು.

ಹೌದು, ನೀವು ಇಂದು ನಿಮ್ಮನ್ನು ಶಿರ್ಕ್ ಬಿದ್‌ಅತ್‌ಗಳಿಂದ ತಡೆಯುವ ಮತ್ತು ಮೀಲಾದುನ್ನೆಬಿಯಂತಹ ಆಚರಣೆಗಳನ್ನು ವಿರೋಧಿಸುವ ಜನರನ್ನು ಪ್ರವಾದಿ ವಿರೋಧಿಗಳೆಂದು, ಪ್ರವಾದಿ ನಿಂದಕರೆಂದು ಕರೆಯುವುದಾದರೆ ಜೀವನದಲ್ಲಿ ಒಂದು ಬಾರಿಯೂ ಮೀಲಾದುನ್ನೆಬಿ ಆಚರಿಸದ ಮಹಾನ್ ಸ್ವಹಾಬಿಗಳ ಬಗ್ಗೆ ಏನು ಹೇಳುವಿರಿ? ಪ್ರವಾದಿಯ ಜನ್ಮದಿನಾಚರಣೆಗಾಗಿ ತೋರಣ ಕಟ್ಟದ, ದೀಪಾಲಂಕಾರ ಮಾಡದ, ಸಭೆ-ಸಮಾರಂಭ ಹಮ್ಮಿಕೊಳ್ಳದ ಮತ್ತು ಭರ್ಜರಿ ಭೋಜನ ಕೂಟ ಏರ್ಪಡಿಸದ ತಾಬಿಈನ್‌ಗಳು, ಮುಹದ್ದಿಸೀನ್‌ಗಳು ಜಗದ ಉದ್ದಗಲಕ್ಕೆ ಇಸ್ಲಾಮಿನ ಸಂದೇಶ-

ವನ್ನು ತಲುಪಿಸಿದ ಆ ಮಹಾನ್ ನಾಯಕರನ್ನು ಏನೆಂದು ಕರೆಯುವಿರಿ?

ಈಗ ಸತ್ಯವನ್ನು ತಿಳಿದುಕೊಂಡ ಬಳಿಕವೂ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಗೆ ವಿರುದ್ಧವಾಗಿ ಹಿಂದಿನ ಅದೇ ರೀತಿಯಲ್ಲಿ ಮೀಲಾದುನ್ನೆಬಿ ಆಚರಿ-ಸಲು ನೀವು ಸನ್ನದ್ಧರಾಗುವುದಾದರೆ ಅಲ್ಲಾಹನ ಈ ಘೋಷಣೆಯನ್ನು ಕೇಳಿರಿ.

“ಪ್ರವಾದಿಯವರ ಆಜ್ಞೆಗೆ ವಿರುದ್ಧವಾಗಿ ಚಲಿಸುವವರು ತಾವು ಯಾವುದಾದರೂ ಆಪತ್ತಿನಲ್ಲಿ ಸಿಲುಕಿ ಬಿಡಬ-ಹುದು ಅಥವಾ ತಮ್ಮ ಮೇಲೆ ವೇದನಾಯುಕ್ತ ಶಿಕ್ಷೆ ಎರಗಬಹುದೆಂದು ಭಯಪಡಬೇಕು..” (ಅನ್ನೂರ್ 63)

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

**Jamiyathe Ahle Hadees
Mangalore**